# ಕಥೋಪದೇಶ

## ತ್ಯಾಗದ ರಾಜ



ಕಲೆ : ಶ್ರೀಕಾಂತ

ಸಂಗೀತ ಸಾಮ್ರಾಜ್ಯದ ಅಭಿನವ ಚಕ್ರವರ್ತಿಯಾಗಿದ್ದ ತ್ಯಾಗರಾಜರ ಹೆಸರನ್ನು ಕೇಳದವರಾರು. ಸರಳರೂ ಭಗವದ್ ಭಕ್ತರೂ ಆಗಿದ್ದ ಅವರು ತ್ಯಾಗ ವೈರಾಗ್ಯಗಳ ತವನಿಧಿಯಾಗಿದ್ದರು. ಅವರು ನಿತ್ಯವೂ ಭಗವದ್ ಸಂಕೀರ್ತನೆ ಮಾಡುತ್ತಾ, ಭಿಕ್ಷಾಟನೆ ಮಾಡಿ ಬಂದುದರಲ್ಲಿ ಜೀವನ ಸಾಗಿಸುತ್ತಾ ಸಂತೃಪ್ತಿಯಿಂದಿದ್ದರು. ಇಂಥ ಮಹಾಪುರುಷರು ಜೀವನ ವೃತ್ತಿಗಾಗಿ ಭಿಕ್ಷಾಟನೆ ಮಾಡುವುದು ಆ ಊರಿನ ಧನಿಕನೊಬ್ಬನಿಗೆ ಹಿಡಿಸಲಿಲ್ಲ. ಇವರು ಭಿಕ್ಷೆ ಬೇಡುವುದನ್ನು ಬಿಟ್ಟು ನೆಮ್ಮದಿಯಿಂದ ಜೀವನ ಸಾಗಿಸುವಂತೆ ಮಾಡಬೇಕೆಂದು ಆ ಸಭ್ಯ ಧನಿಕ ಬಹಳವಾಗಿ ಹಂಬಲಿಸಿದ. ನೇರವಾಗಿ ಧನಸಹಾಯ ಮಾಡೋಣವೆಂದರೆ, ತ್ಯಾಗರಾಜರು ಖಂಡಿತವಾಗಿ ಒಪ್ಪುತ್ತಿರಲಿಲ್ಲ. ಕೊನೆಗೆ ಒಂದು ಉಪಾಯವನ್ನು ಕಂಡುಕೊಂಡ. ಚಿನ್ನದಿಂದ ಅಕ್ಕಿಕಾಳುಗಳನ್ನು ಮಾಡಿಸಿ ಭಿಕ್ಷೆಗೆ ಬಂದಾಗ ಅವರಿಗೆ ತಿಳಿಯದಂತೆ ಜೋಳಿಗೆಯೊಳಗೆ ಹಾಕಿಸಿಬಿಡುವುದೆಂದು ತೀರ್ಮಾನಿಸಿಕೊಂಡ. ಅದರಂತೆ ಚಿನ್ನದಿಂದ ಅಕ್ಕಿಕಾಳುಗಳನ್ನು ಮಾಡಿಸಿ ತ್ಯಾಗರಾಜರು ಭಿಕ್ಷೆಗೆ ಬರುವುದನ್ನೇ ಕಾಯುತ್ತ ಇದ್ದ. ಅವರು ಭಿಕ್ಷೆಗಾಗಿ ಬಂದ ದಿನ ಯಥಾರೀತಿಯಲ್ಲಿ ತನ್ನ ಮಡದಿಯಿಂದ ಸಿದ್ಧಪಡಿಸಿಟ್ಟುಕೊಂಡಿದ್ದ ಚಿನ್ನದ ಅಕ್ಕಿಕಾಳುಗಳನ್ನು ಜೋಳಿಗೆಯೊಳಗೆ ಹಾಕಿಸಿಬಿಟ್ಟ. ಭಿಕ್ಷೆ ಮುಗಿಸಿ ಮನೆಗೆ ಬಂದ ತ್ಯಾಗರಾಜರು ಎಂದಿನಂತೆ ಜೋಳಿಗೆಯನ್ನು ಮಡದಿಗೆ ನೀಡಿ ಸ್ನಾನಕ್ಕೆ ಹೋದರು. ಆ ತಾಯಿ ಅಕ್ಕಿ ಅರಸುವಾಗ, ಅಕ್ಕಿಯ ಜೊತೆಯಲ್ಲಿ ಬೇರೆ ಏನೋ ಬೆರತಿರುವುದಾಗಿ ಶಂಕಿಸಿದರು. ಆದರೆ ಅದೇನೆಂದು ಅವರಿಗೆ ತಿಳಿಯಲಿಲ್ಲ. ಸ್ನಾನ ಮುಗಿಸಿಕೊಂಡು ಬಂದ ಪತಿಗೆ "ಇದೇನು?" ಎಂದು ಕೇಳಿದರು. ತ್ಯಾಗರಾಜರಿಗೆ ಕ್ಷಣಾರ್ಧದಲ್ಲಿ "ಇದೇನೆಂದು" ತಿಳಿದುಹೋಯಿತು. ಅವರು ಕ್ಷಣವೂ ತಡ ಮಾಡದೆ "ಅಕ್ಕಿ ಹುಳುತುಹೋಗಿದೆ. ಚರಂಡಿಗೆ ಸುರಿದು ಬಿಡು" ಎಂದು ಹೇಳಿದರು. ಪತಿಯ ನೆರಳಾಗಿದ್ದ ಆ ಮಹಾತಾಯಿ ಪತಿಯ ನುಡಿಯನ್ನು ಅನುಸರಿಸಿದರು.

ಇವರು ನಿಜವಾಗಿಯೂ ತ್ಯಾಗದ-ರಾಜರಲ್ಲವೆ?

*ಸಂಗ್ರಹ : ಡಿ.ಕೆ. ಈರೇಗೌಡ.*